**ಗುಬ್ಬಿ ತಾಲ್ಲೂಕಿನಲ್ಲಿನ ವಿದ್ಯುತ್ ಅಭಾವವನ್ನು ಹೋಗಲಾಡಿಸುವ ಬಗ್ಗೆ**

698 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಬ್ಬಿ ತಾಲ್ಲೂಕು ಹಾಗಲವಾಡಿ ಪ್ರದೇಶವಲ್ಲಿ ಇತ್ತೀಚೆಗೆ ವಿದ್ಯುಚ್ಛಕ್ತಿ ಸರಬರಾಜಿನ ತೊಂದರೆಯಿಂದ ಅನೇಕ ದಿನಗಳಿಂದ ಜನರು ಕತ್ತಲಲ್ಲೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಆ ಪ್ರದೇಶಕ್ಕೆ ವಿದ್ಯುಚ್ಛಕ್ತಿ ಸರಬರಾಜು ಬಲಪಡಿಸಲು ಇಲಾಖೆಯು ಹಾಕಿಕೊಂಡಿರುವ ಕಾರ್ಯಕ್ರಮವೇನು?*

ಇ) *ಗುಬ್ಬಿ ತಾಲ್ಲೂಕಿನ ಹೊಸಕೆರೆಗೆ ಒಂದು ಉಪ ವಿದ್ಯುತ್ ಸ್ಥಾವರ (ಸಬ್ ಸ್ಟೇಷನ್) ಮಂಜೂರಾಗಿದ್ದು, ಇದುವರೆಗೂ ಕಾರ್ಯಗತಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ, ಹಾಗಲವಾಡಿ ಹೋಬಳಿಯಲ್ಲಿ ವಿದ್ಯುತ್ ಅಭಾವ, ಓಲ್ಟೇಜ್ ವಿರುಪೇರು ಸರಿಪಡಿಸಲು ಸರ್ಕಾರದ ನಿರ್ದಿಷ್ಟ ಕ್ರಮ ಮತ್ತು ಯೋಜನೆಗಳೇನು?*

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು) :

ಅ) ಹೌದು

ಆ) ಹಾಲಿ ಹಾಗಲವಾಡಿ ಪ್ರದೇಶಕ್ಕೆ ಚಿಕ್ಕನಾಯಕನಹಳ್ಳಿಯಲ್ಲಿರುವ 110:11 ಕೆ.ವಿ. ವಿದ್ಯುತ್ ಉಪ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿರುವುದರಿಂದ ವಿದ್ಯುತ್ ಸರಬರಾಜಿನಲ್ಲಿ ಆಗಾಗ್ಗೆ ಅಡಚಣೆಯುಂಟಾಗುತ್ತಿದೆ. ಇದರ ನಿವಾರಣೆಗಾಗಿ ಗುಬ್ಬಿ ತಾಲ್ಲೂಕಿನ ನಿಟ್ಟೂರಿನಲ್ಲಿರುವ 110:11 ಕೆವಿ ವಿದ್ಯುತ್ ಉಪಕೇಂದ್ರದಿಂದ ಹಾಗಲವಾಡಿ ಪ್ರದೇಶಕ್ಕೆ ವಿದ್ಯುತ್ ಸರಬರಾಜನ್ನು ವಿಸ್ತಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಇಲ್ಲ. ಈ ಸಂಬಂಧದ ಪ್ರಸ್ತಾವನೆಯು ಮಂಡಳಿಯ ಪರಿಶೀಲನೆಯಲ್ಲಿದೆ.

ಈ) ಪ್ರಶ್ನೆಯ 'ಅ' ಭಾಗದ ಉತ್ತರದಲ್ಲಿ ತಿಳಿಸಿರುವಂತೆ ಹಾಗಲವಾಡಿ ಪ್ರದೇಶಕ್ಕೆ ನಿಟ್ಟೂರಿನಲ್ಲಿರುವ 110:11 ಕೆವಿ ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ನಿಟ್ಟೂರಿನಿಂದ ಹಾಗಲವಾಡಿಗೆ ಒಂದು 11 ಕೆವಿ ಎಕಸ್ಪ್ರೆಸ್ ಫೀಡರ್ ಅನ್ನು ನಿರ್ಮಾಣ ಮಾಡಲಾಗುತ್ತಿದ್ದು, ಕೆಲಸವು ಪ್ರಗತಿಯಲ್ಲಿದೆ. ಈ ಕಾರ್ಯವು ಪೂರ್ಣಗೊಂಡ ನಂತರ ಹಾಗಲವಾಡಿ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯು ಸುಧಾರಣೆಗೊಳ್ಳುವುದು.

**ವಿತ ನೀರಾವರಿ ನಿಗಮಗಳನ್ನು ಮುಚ್ಚುವ ಬಗ್ಗೆ**

657 - ಶ್ರೀ ಗುರುಪಾದಪ್ಪ ನಾಗಮಾರಹಳ್ಳಿ (ಜೆರಾದ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಎಲ್ಲೆಲ್ಲಿ ವಿತ ನೀರಾವರಿ ನಿಗಮವನ್ನು ಸ್ಥಾಪಿಸಲಾಗಿದೆ?*

ಆ) *ಅವುಗಳನ್ನು ಯಾವಾಗ ಸ್ಥಾಪಿಸಲಾಯಿತು?*

ಇ) *ಅವುಗಳನ್ನು ಯಾವ ಉದ್ದೇಶಗಳನ್ನಿಟ್ಟುಕೊಂಡು ಸ್ಥಾಪಿಸಲಾಯಿತು?*

ಈ) *ಆದಕ್ಕೆ ಹೂಡಲಾಗಿರುವ ಬಂಡವಾಳವೆಷ್ಟು?*

ಉ) *ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದ ಸಂಖ್ಯೆಯೆಷ್ಟು?*

ಊ) *ನಿಗಮ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಸಿಬ್ಬಂದಿ ವರ್ಗಕ್ಕೆ ಸಂಬಳ ಮತ್ತು ಇತರೆ ಭತ್ಯೆಗಳಿಗಾಗಿ ಪ್ರತಿವರ್ಷ ವೆಚ್ಚ ಮಾಡಲಾಗುತ್ತಿರುವ ಹಣವೆಷ್ಟು?*

*ಋ) ಆ ನಿಗಮವನ್ನು ಪ್ರಾರಂಭಿಸಿದ ಉದ್ದೇಶ ಸಫಲವಾಗಿದೆಯೇ?*

*ಋೂ)ಆ ನಿಗಮವನ್ನು ಮುಚ್ಚುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?*

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಕಾವೇರಿ ಜಲಾನಯನ ಪ್ರದೇಶದಲ್ಲಿ ಕಾವೇರಿ ಜಲಾನಯನ ವಿತ ನೀರಾವರಿ ನಿಗಮವನ್ನು ಮೈಸೂರಿನಲ್ಲಿ ಸ್ಥಾಪಿಸಲಾಗಿದೆ. ಹಾಗೂ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಕೃಷ್ಣಾ ಜಲಾನಯನ ವಿತ ನೀರಾವರಿ ನಿಗಮವನ್ನು ಬಿಜಾಪುರದಲ್ಲಿ ಸ್ಥಾಪನೆ ಮಾಡಲಾಗಿದೆ.

ಆ) ಅವುಗಳನ್ನು ಕ್ರಮವಾಗಿ 2-6-86ರಂದು ಮೈಸೂರಿನಲ್ಲಿ ಹಾಗೂ 9-6-86ರಂದು ಬಿಜಾಪುರದಲ್ಲಿ ಸ್ಥಾಪಿಸಲಾಗಿದೆ.

ಇ) ರಾಜ್ಯದಲ್ಲಿ ಜಲಸಂಪನ್ಮೂಲವನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿಕೊಂಡು ಶೀಘ್ರಗತಿಯಲ್ಲಿ ವಿತ ನೀರಾವರಿ ಯೋಜನೆಗಳ ಕಾಮಗಾರಿಯನ್ನು ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆದುಕೊಂಡು ಪೂರ್ಣಗೊಳಿಸಲು ಈ ನಿಗಮವನ್ನು ಸ್ಥಾಪಿಸಲಾಯಿತು.

ಈ) ತಲಾ 55 ಲಕ್ಷ ರೂ.ಗಳ ಬಂಡವಾಳವಿದೆ.

ಉ)

| ನಿಗಮದ | ಸಿಬ್ಬಂದಿ | ಎರವಲು ಸಿಬ್ಬಂದಿ | ಒಟ್ಟು |
|---|---|---|---|
| ಕಾವೇರಿ ಜಲಾನಯನ ವಿತ ನೀರಾವರಿ ನಿಗಮ | 193 | 11 | 204 |
| ಕೃಷ್ಣಾ ಜಲಾನಯನ ವಿತ ನೀರಾವರಿ ನಿಗಮ | 163 | 11 | 174 |
| | 356 | 22 | 678 |

ಊ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಋ) ಇಲ್ಲ

ಋೂ) ಪ್ರಶ್ನೆ ಉದ್ಭವಿಸುವುದಿಲ್ಲ

**ತುಮಕೂರು ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಒದಗಿಸಿರುವ ಹಣದ ಬಗ್ಗೆ**

697 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) 1993-94ರ ಸಾಲಿನಲ್ಲಿ ತುಮಕೂರು ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗಾಗಿ ಸರ್ಕಾರ ಒದಗಿಸಿದ ಹಣವೆಷ್ಟು ಹಾಗೂ ತಾಲ್ಲೂಕುವಾರು ಮಾಡಿದ ಖರ್ಚು ಎಷ್ಟು?*

*ಆ) ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಅನುಮತಿ ಪಡೆಯದೆ ಸಾಮಗ್ರಿಗಳನ್ನು ಖರೀದಿಸಿ ಹಣ ದುರುಪಯೋಗ ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಇ) ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರದವರು ತೆಗೆದುಕೊಂಡು ಕ್ರಮವೇನು?*